# ‘೧೦೮ ಜೀವನಜ್ಯೋತಿ – ಕಥಾಮಾಲಾ’

ವಿವಿಧ ಮೂಲಗಳಿಂದ ಸಂಗ್ರಹಿಸಿದ ನೂರಾರು ಕಥೆಗಳನ್ನು ತಮ್ಮ ವಿಶಿಷ್ಟ ಕಥನ ಶೈಲಿಯಿಂದ ನಿರೂಪಿಸಿ, ಪ್ರಕಟಿಸುತ್ತಾ ಬಂದಿರುವ ಡಾ. ವಾಗೀಶ್ವರೀ ಶಿವರಾಮ ಅವರ ನೂತನ ಪುಸ್ತಕವೇ **‘೧೦೮ ಜೀವನಜ್ಯೋತಿ – ಕಥಾಮಾಲಾ’**. ಈ ಕೃತಿಯು ಲೇಖಕರ ೩೪ನೇ ಕೃತಿಪುಷ್ಪವಾಗಿದೆ. ನೈತಿಕ, ಆಧ್ಯಾತ್ಮಿಕ ಮೌಲ್ಯಗಳಿಂದ ತುಂಬಿ ತುಳುಕುವ ಈ ಕಥೆಗಳು ಎಳೆಯ ಬಾಲಕರಿಂದ ಹಿಡಿದು, ವಿದ್ಯಾರ್ಥಿಗಳಿಗೂ ಹೆತ್ತವರಿಗೂ ಅಧ್ಯಾಪಕರಿಗೂ, ಅಷ್ಟೇಕೆ ಎಲ್ಲ ವಯಸ್ಸಿನವರಿಗೂ ಆಪ್ಯಾಯಮಾನವಾಗುವಂಥವುಗಳು. ಈ ಪುಸ್ತಕದ ಉಪಶೀರ್ಷಿಕೆಯಲ್ಲಿ ‘ಜೀವನವನ್ನು ಉಜ್ಜೀವನಗೊಳಿಸುವ ಕಥೆಗಳು ಹಾಗೂ ಸುಭಾಷಿತಗಳು’ ಎಂದು ಇದರ ವಿಷಯ, ವ್ಯಾಪ್ತಿಯನ್ನು ತಿಳಿಸಿಕೊಡಲಾಗಿದೆ. ಜೀವನದ ಹತ್ತು ಹಲವು ಸಂದಿಗ್ಧ ಪರಿಸ್ಥಿತಿಗಳಲ್ಲಿ ದಾರಿತೋರಬಲ್ಲ ಗುಣ ಈ ಕಥೆಗಳಲ್ಲಿ ಕಂಡುಬರುವುದರಿಂದ, ಈ ಪುಸ್ತಕದ ‘ಜೀವನಜ್ಯೋತಿ ಕಥಾಮಾಲಾ’ ಎಂಬ ಹೆಸರು ಸಾರ್ಥಕವಾಗಿದೆ.

ಈ ಗ್ರಂಥದ ಶೀರ್ಷಿಕೆಯೇ ಸೂಚಿಸುವಂತೆ, ಇಲ್ಲಿ ೧೦೮ ಕಥೆಗಳಿವೆ. ಇವುಗಳನ್ನು ವಿಷಯಕ್ಕೆ ಅನುಗುಣವಾಗಿ ವಿಭಾಗಿಸಲಾಗಿದೆ: ೧) ರಾಮಾಯಣ, ಮಹಾಭಾರತ, ಪುರಾಣ, ಐತಿಹಾಸಿಕ ಕಥೆಗಳು (ಈ ವಿಭಾಗದಲ್ಲಿ ೨೬ ಕಥೆಗಳಿವೆ) ೨) ಕೌಟುಂಬಿಕ ಪರಿಸರದ ಜೀವನಜ್ಯೋತಿ ಕಥೆಗಳು (೭ ಕಥೆಗಳಿವೆ) ೩) ಸಾಮಾಜಿಕ ಪರಿಸರದ ಜೀವನ ಜ್ಯೋತಿ ಕಥೆಗಳು (೪೧ ಕಥೆಗಳಿವೆ) ೪) ಆಧ್ಯಾತ್ಮಿಕ ತತ್ತ್ವದ ಜೀವನಜ್ಯೋತಿ ಕಥೆಗಳು (೨೭ ಕಥೆಗಳಿವೆ). ಇವುಗಳಲ್ಲಿ ಮೂರನೇ ವಿಭಾಗ ದೊಡ್ಡದು; ಆದರೆ ಇಲ್ಲಿನ ವಿಷಯವೈವಿಧ್ಯ ವಿಪುಲವಾಗಿದೆ. ಈ ಕಥೆಗಳು ಅನೇಕ ರೀತಿಯ ಮೌಲಿಕ ಸಂದೇಶವನ್ನೊಳಗೊಂಡಿವೆ; ಆದ್ದರಿಂದ ಓದಿದ ಬಳಿಕ ಅತ್ಯಂತ ಉಪಯುಕ್ತವೆನಿಸುತ್ತವೆ.




**ಕೃತಿ:** 108 ಜೀವನಜ್ಯೋತಿ – ಕಥಾಮಾಲಾ
**ಲೇಖಕ :** ಡಾ. ವಾಗೀಶ್ವರೀ ಶಿವರಾಮ
**ಪ್ರಕಾಶನ :** ವಾಗೀಶ್ವರೀ ಪ್ರಕಾಶನ
ಮೊ. 9986200736 (ಮೊ. & ವಾಟ್ಸಪ್)
**ಬೆಲೆ:** 200/– **ಪುಟ:** 216

ಪ್ರತಿಯೊಂದು ಕಥೆಯ ಕೊನೆಯಲ್ಲಿ ಅದರ ಆಶಯಕ್ಕೆ ಹೊಂದಿಕೆಯಾಗುವ ಒಂದು ಸುಭಾಷಿತ ಅಥವಾ ಶ್ಲೋಕವನ್ನು ಅನುವಾದದೊಂದಿಗೆ ನೀಡುವುದು ಡಾ. ವಾಗೀಶ್ವರೀ ಶಿವರಾಮ ಅವರ ಪದ್ಧತಿ. ಇವರ ಹಿಂದಿನ ಪುಸ್ತಕಗಳಲ್ಲಿ ಈ ಕ್ರಮವನ್ನೇ ಅನುಸರಿಸಲಾಗಿದೆ; ಇಲ್ಲೂ ಈ ಪದ್ಧತಿಯನ್ನು ಅವರು ಮುಂದುವರಿಸಿದ್ದಾರೆ. ಇದರಿಂದ ಕಥೆಗೆ ಒಂದು ಮೌಲಿಕ ಘನತೆಯೂ, ನೈತಿಕ ಉನ್ನತಿಯೂ ಲಭಿಸಿದಂತಾಗುತ್ತದೆ. ಓದುವವರಿಗಿಂತ ಹೆಚ್ಚಾಗಿ, ಇದು ಕಥೆಯನ್ನು ವಿವರಿಸಿ ಹೇಳುವವರಿಗೆ ಹೆಚ್ಚು ಅನುಕೂಲವಾದೀತು. ಇಲ್ಲಿನ ಕೆಲವು ಶ್ಲೋಕಗಳ ಮೂಲಕೃತಿ ಯಾವುದೆಂದು ತಿಳಿಸಲಾಗಿದೆ; ಆದರೆ ಹಲವಾರು ಶ್ಲೋಕಗಳ ಮೂಲವನ್ನು ತಿಳಿಸಿಲ್ಲ. ಎಲ್ಲ ಶ್ಲೋಕಗಳಿಗೂ ಮೂಲಕೃತಿಯ ಹೆಸರನ್ನು ಸೂಚಿಸಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು.

ಈ ಕಥೆಗಳ ಶೈಲಿ ಅತ್ಯಂತ ನೇರವಾಗಿದೆ, ಸುಲಭವಾಗಿ ಗ್ರಾಹ್ಯವಾಗುವಂತಿದೆ. ಹಲವೆಡೆ ನಾಟಕೀಯ ಸನ್ನಿವೇಶ, ಸಂಭಾಷಣೆಗಳನ್ನು ಒಳಗೊಂಡ ಕಥೆಗಳು ವಿಶೇಷವಾಗಿ ನಮ್ಮ ಗಮನ ಸೆಳೆಯುತ್ತವೆ. ಇಲ್ಲಿನ ಕಥೆಗಳಿಗೆಲ್ಲ ಒಂದೊಂದು ಉಪಶೀರ್ಷಿಕೆಯಿರುವುದು ಒಂದು ವಿಶೇಷ. ಉದಾಹರಣೆಗೆ, ‘ಗುರಿಮುಟ್ಟಲು ಕಾಲ್ಪನಿಕ ಬಂಧನಗಳಿಂದ ಹೊರಬರಬೇಕು’ ಎಂಬುದು ಪ್ರಧಾನ ಶೀರ್ಷಿಕೆಯಾದರೆ, ‘ಕತ್ತೆಗಳನ್ನು ಮಾರಲು ಹೊರಟಿದ್ದ ಯುವಕ’ ಎಂಬುದು ಉಪಶೀರ್ಷಿಕೆ. ಈ ಕಥೆಗಳ ಪ್ರಧಾನ ಆಶಯವನ್ನು ಶೀರ್ಷಿಕೆಯೂ, ಕಥೆಯ ಸಾಂದರ್ಭಿಕ ಚೌಕಟ್ಟನ್ನು ಉಪಶೀರ್ಷಿಕೆಯೂ ಸೂಚಿಸುತ್ತದೆ ಎಂದು ಸ್ಪಷ್ಟವಾಗಿ ಇಲ್ಲಿ ಕಂಡುಬರುತ್ತದೆ. ಶೀರ್ಷಿಕೆ, ಉಪಶೀರ್ಷಿಕೆ, ಕಥೆ, ಕೊನೆಯಲ್ಲಿ ಸುಭಾಷಿತ ಅಥವಾ ಶ್ಲೋಕ, ಅದರ ಅನುವಾದ — ಹೀಗೆ ಪ್ರತಿಯೊಂದು ಕಥೆಯನ್ನೂ ಈ ಕ್ರಮದಲ್ಲಿ ಪ್ರಸ್ತುತಪಡಿಸುವಲ್ಲಿ ಲೇಖಕರು ವಹಿಸಿದ ಶ್ರಮವನ್ನು ಗಮನಿಸಬಹುದು. ಈ ರೀತಿ ನಿರೂಪಿಸಿದರೆ ಅದು ಪರಿಣಾಮಕಾರಿಯಾಗಿ ಓದುಗರನ್ನು ತಲುಪೀತು ಎಂಬ ವಿಷಯದಲ್ಲಿ ಲೇಖಕರಿಗಿರುವ ದೃಢ ವಿಶ್ವಾಸವನ್ನು ಇದು ತೋರಿಸಿಕೊಡುತ್ತದೆ. ಇದರೊಂದಿಗೆ ಕಥೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಸುಂದರ ರೇಖಾಚಿತ್ರಗಳೂ ಇದ್ದಿದ್ದರೆ ಕೃತಿಯ ಅಂದ ಇನ್ನಷ್ಟು ಹೆಚ್ಚುತ್ತಿತ್ತು ಅನ್ನಿಸುತ್ತದೆ. ಈ ದಿಕ್ಕಿನಲ್ಲಿ ಲೇಖಕರು ತಮ್ಮ ಮುಂದಿನ ಪ್ರಕಟಣೆಯ ಅಥವಾ ಮರುಮುದ್ರಣದ ಸಂದರ್ಭದಲ್ಲಿ ಗಮನ ಹರಿಸುವರೆಂದು ನಿರೀಕ್ಷಿಸೋಣ. ಒಟ್ಟಿನಲ್ಲಿ, ಸಂಗ್ರಹಯೋಗ್ಯವಾದ, ಬಿಡುವಿನ ವೇಳೆಯಲ್ಲಿ ಯಾವ ಪುಟವನ್ನಾದರೂ ತೆರೆದು ಓದಿ ಆನಂದಿಸಬಹುದಾದ ಅಪೂರ್ವ ಕಥಾಸಂಕಲನ ಇದಾಗಿದೆ. ಇಲ್ಲಿನ ಕಥೆಗಳ ಮೌಲ್ಯವೂ ಉನ್ನತವಾಗಿದೆ. ಎಲ್ಲ ಬಗೆಯ ಓದುಗರಿಗೆ ಸಂಗ್ರಹಯೋಗ್ಯವಾದ ಕೃತಿಯಿದು.